



ಹಸಿರಿನಲಿ ಒಂದಾಗಿ ಕೂಡುವ ಮಿಡತೆ
ಭುಸ್ಸೆನ್ನುವ ಸರ್ಪ
ಕಣ್ಣ ಕೇಂದ್ರ ಹಿಡಿದಿಡುವ ಕುದುರೆ
ರಸ್ತೆಯಂಚಲಿ ಚಡ್ಡಿ ಇಳಿಸಿ ಕುಳಿತವರ
ಆಸೆಯಿಂದ ಕಾಯ್ವ ಕೀಟಲೆಯ ಹಂದಿ–
ಯಾವುವೂ ಇಲ್ಲ

ಮನ ಬಂದಂತೆ ಹಾಡುತ್ತಿದ್ದ ಕೋಗಿಲೆಯನು
ಮಣ್ಣ ಹುರಿಗೊಳಿಸುತ್ತಿದ್ದ ಎರೆಹುಳುವನು
ಸ್ವಚ್ಛಂದ ಹಾರಾಟದ ಚಿಟ್ಟೆಯನು
ಹೊಸಕಿ ಹಾಕಲಾಗಿದೆ

ನಗಿಸುತ್ತಿದ್ದ ಅಣಕದ ಮಂಗವನು
ನಮ್ಮ ಪೂರ್ವಜ ಎಂದೂ ನೋಡದೇ–
ಶಾಂತಗೊಳಿಸಲಾಗಿದೆ
ಆಮೆಯ ಚಿಪ್ಪು ಕಿತ್ತಿಟ್ಟು ಒಡಿಸಲಾಗುತ್ತಿದೆ

ಅದೃಶ್ಯ ಪ್ರೇತಗಳ ಆಕ್ರಂದನದ ಹಿಮ್ಮೇಳದಲಿ
ಹುಡುಕುತ್ತೇನೆ ನನ್ನ ನೂರ್ಮಾಳಿಗಾಗಿ

ಹಾಗಂತ ಎಲ್ಲ ಪ್ರಾಣಿಗಳೂ ಮಾಯವಾಗಿಲ್ಲ
ಮನ್ನಿಸಲಾಗಿದೆ–
ಮಾತನು ಚಾಚೂ ತಪ್ಪದೇ ಅನುಕರಿಸುವ
ಗಿಳಿಗಳನು ಪುಷ್ಕಳ ಉಣ್ಣೆಯ ಕುರಿಗಳನು
ಒದ್ದರೂ ಪಾದ ನೆಕ್ಕುವ ಕುನ್ನಿ ಮರಿಗಳನು
ತಲೆ ತಗ್ಗಿಸಿ ನಡೆವ ಮೇಕೆಗಳನು
ಮೌನದಲಿ ನೂಲುವ ಜೇಡನನು

